1ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 270–2025

**ಸಿ.ಡಬ್ಲ್ಯು -**16, **ಪಿ.ಡಬ್ಲ್ಯು-**9

**ಸಾಕ್ಷಿದಾರರ ಹೆಸರು** : ಶೇಖ್ ಫೈರೋಜ್ ಅಹ್ಮದ್
ತಂದೆಯ **ಹೆಸರು** : ಶೇಖ್ ಫಜ್ಲೂರ್ ರೆಹಮಾನ್
**ವಯಸ್ಸು** : 42 ವರ್ಷ
**ಉದ್ಯೋಗ** : ಮುಖ್ಯ ಪೇದೆ, ಸಾಗರ ಗ್ರಾಮಾಂತರ ಪೊಲೀಸ್ ಠಾಣೆ,
**ವಾಸ** : ಸಾಗರ

**ಪ್ರಮಾಣೀಕರಿಸಿದ ದಿನಾಂಕ :**23.06.2026.

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು 2022 ರಿಂದ ಇಲ್ಲಿಯವರೆಗೂ ಸಾಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ:20.01.2024 ರಂದು ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯ ಗುನ್ನಾ ಸಂಖ್ಯೆ 251/2023 ರಲ್ಲಿ ಆರೋಪಿ ಮತ್ತು ಕಳ್ಳತನವಾದ ವಸ್ತುಗಳ ತಪಾಸಣೆಗೆಂದು ನನ್ನನ್ನು ನೇಮಕ ಮಾಡಿದ್ದು, ಆ ಮೇರೆಗೆ ನಾನು, ಚಾಸ 15, 17 ರವರೊಂದಿಗೆ ರಾತ್ರಿ 9 ಗಂಟೆಗೆ ಠಾಣೆಯಿಂದ ಗಸ್ತಿಗೆಂದು ಹೊರಟೆವು. ಯಳವರಸಿ, ತ್ಯಾಗರ್ತಿ ಕಡೆಗಳಲ್ಲಿ ಗಸ್ತು ನಿರ್ವಹಿಸಿದೆವು. ಸಾಗರ ನಗರಕ್ಕೆ ಬಂದು ಹೊಸನಗರ ರಸ್ತೆಯ ಕಡೆ ಮತ್ತು ಸೊರಬ ರಸ್ತೆಯ ಕಡೆ ಗಸ್ತು ಮಾಡಿದೆವು. ಸಾಗರ ನಗರದ ಅಗ್ರಹಾರ ಸರ್ಕಲ್ ಬಳಿ ಬಂದಾಗ ನಮ್ಮ ವಾಹನದ ಎದುರಿಗೆ ಒಂದು ಸ್ಕೂಟಿ ಬಂತು, ಅದರಲ್ಲಿ ಇಬ್ಬರು ವ್ಯಕ್ತಿಗಳಿದ್ದರು. ಅವರು ನಮ್ಮನ್ನು ನೋಡಿ ಗಾಬರಿಯಾಗಿ ಹಿಂದೆ ಹೋಗಲು ಪ್ರಯತ್ನಿಸಿದರು. ಆಗ ನಾವು ಅವರನ್ನು ಹಿಡಿದೆವು. ವಿಚಾರಣೆ ಮಾಡಿದಾಗ ಸಮಂಜಸವಾದ ಉತ್ತರವನ್ನು ಆ ವ್ಯಕ್ತಿಗಳು ನೀಡದ ಕಾರಣ ಹಾಗೂ ಆ ವ್ಯಕ್ತಿಗಳು ಓಡಿಸುತ್ತಿದ್ದ ದ್ವಿ ಚಕ್ರ ವಾಹನಕ್ಕೆ ನಂಬರ್ ಪ್ಲೇಟ್ ಇಲ್ಲದ ಕಾರಣ ಅನುಮಾನಗೊಂಡು ಆ ಇಬ್ಬರು ವ್ಯಕ್ತಿಗಳು ಮತ್ತು ದ್ವಿ ಚಕ್ರ ವಾಹನವನ್ನು ತೆಗೆದುಕೊಂಡು ಬೆಳಿಗ್ಗೆ 5.30 ಕ್ಕೆ ಚಾಸ 21 ರವರ ಮುಂದೆ ಹಾಜರುಪಡಿಸಿದೆ.

3. ಚಾಸ 21 ರವರು ಆ ಇಬ್ಬರು ವ್ಯಕ್ತಿಗಳನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಷಣ್ಮುಖ ಹಾಗೂ ಧನುಷ್ ಎಂದು ತಿಳಿಸಿದರು. ಆ ವ್ಯಕ್ತಿಗಳು ತಾವು ಕಳ್ಳತನ ಮಾಡಿದ ಬಂಗಾರದ ಆಭರಣಗಳನ್ನು ಶಿವಮೊಗ್ಗದಲ್ಲಿ ಮಾರಾಟ ಮಾಡಲು ಹೋಗುತ್ತಿದ್ದೆವು ಎಂದು ತಿಳಿಸಿದರು.

ಸದರಿ ಬಂಗಾರದ ಆಭರಣಗಳನ್ನು ದ್ವಿ ಚಕ್ರ ವಾಹನದಲ್ಲಿ ಇಟ್ಟಿರುವುದಾಗಿ ತಿಳಿಸಿದರು. ದ್ವಿ ಚಕ್ರ ವಾಹನವನ್ನು ಮತ್ತು ಅದರ ಒಳಗೆ ಇರುವ ಬಂಗಾರದ ಆಭರಣಗಳನ್ನು ವಶಪಡಿಸಿಕೊಳ್ಳಲು ಚಾಸ 21, ಚಾಸ 9 ರಿಂದ 11 ರವರನ್ನು ಸ್ಥಳಕ್ಕೆ ಕರೆಸಿದರು. ಸದರಿರವರು ಪಂಚರಾಗಿ ಬರಲು ಒಪ್ಪಿದ ಕಾರಣ ಚಾಸ 21 ಪಂಚರ ಸಮಕ್ಷಮ ದ್ವಿ ಚಕ್ರ ವಾಹನವನ್ನು ಪರಿಶೀಲಿಸಿದಾಗ ಅದರ ಒಳಗೆ ಬಂಗಾರದ ಆಭರಣಗಳು ದೊರೆತವು. ನಂತರ ಚಾಸ 21 ಬಂಗಾರದ ಆಭರಣ ಮತ್ತು ದ್ವಿ ಚಕ್ರ ವಾಹನವನ್ನು ಜಪ್ತುಪಡಿಸಿಕೊಂಡು ವಶಕ್ಕೆ ಪಡೆದರು. ಪಂಚನಾಮೆಯ ಕಾಲಕ್ಕೆ ಫೋಟೋ ತೆಗೆದರು.

4. ಸಾಕ್ಷಿಯು ನಿಪಿ 14 ಅಮಾನತ್ತು ಪಂಚನಾಮೆಯ ದೃಢೀಕೃತನ ನಕಲನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎ.ಎಲ್.ಎಸ್. ವಕೀಲರಿಂದ</u>

1. ಈ ಪ್ರಕರಣದಲ್ಲಿ ಚಾಸ 1 ರವರ ಮನೆಯ ಹಿಂದೆ ಅಡಗಿಕೊಂಡಿದ್ದ ವ್ಯಕ್ತಿ ಈ ಪ್ರಕರಣದ ಆರೋಪಿ ಅಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಕಳ್ಳತನ ಮಾಡದಿದ್ದರೂ ಮಾಡಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯನ್ನು ನಾವು ಹಿಡಿದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.